

ಪತ್ನಿ ಯಶೋದಾ ಅವರೊಂದಿಗೆ ಕೆ.ಟಿ. ಗಟ್ಟಿ

> ಕೆ.ಟಿ. ಗಟ್ಟಿಯವರಿಗೆ ಪ್ರಯಾಣ ಮಾಡುತ್ತ ಕತೆ, ಕಾದಂಬರಿ ಬರೆಯುವುದೆಂದರೆ ಇಷ್ಟ. ಇದಕ್ಕಾಗಿ ಅವರು ನೆವವೊಂದನ್ನು ಹುಡುಕಿ ಪ್ರಯಾಣ ಹೊರಡುವುದಿದೆ! ಮಗಳ ಬಳಿ ಒಂದು ಕವನ ಬರೀತೇನೆ ಮಗಳೆ ಎಂದು ಬೆಂಗಳೂರಲ್ಲಿ ಬಸ್ಸು ಹತ್ತಿದರೆ ಮಂಗಳೂರಿಗೆ ಬರುವಾಗ ಕವಿತೆ ಎಲ್ಲಿ ಅವಿತಿದ್ದರೂ ಅದು ಅವರೊಂದಿಗೆ ಉಜಿರೆ ತಲುಪಲೇ ಬೇಕು! ಒಂದು ಕತೆ ಬರೆಯುತ್ತೇನೆ ಎಂದು ಹೆಂಡತಿಗೆ ಹೇಳಿ, ಕತೆಯ ಒಂದು ಬೀಜವನ್ನು ಮನದಲ್ಲಿ ನೆಟ್ಟು ಬಸ್ಸೇರಿ ಕೂತರೆಂದರೆ ಮತ್ತೆ ಮನೆಸೇರಿದಾಗ ಸಸಿಯನ್ನು ತಂದರೆಂದೇ ತಿಳಿಯಿರಿ! ಆಮೇಲೆ ಪೆನ್ನು ಹಿಡಿದು ಕುಳಿತರೆ ಸಸಿ ಹೆಮ್ಮರವಾಗಿ ಬೆಳೆಯುವ ತನಕ ಅಲ್ಲಾಡದೆ ಕೂತು ಬರೆದಾರು ಇವರು! ಹೀಗೆ ಕರ್ನಾಟಕದ ಬಹುಭಾಗವನ್ನೆಲ್ಲ ಸುತ್ತಿ, ಪುಟ್ಟಪರ್ತಿ, ರಾಯಚೂರು ಎಲ್ಲ ಕಡೆ ತಿರುಗಾಡಿ ಕೊನೆಗೆ ಮಡಿಕೇರಿಯಲ್ಲಿ ಮುಗಿದ ಯಾತ್ರೆಯಲ್ಲಿ ಹುಟ್ಟಿದ ಕಾದಂಬರಿ, 'ಅಂತರಂಗದ ಅತಿಥಿ'!!! ಏನಿಲ್ಲವೆಂದರೂ ಹೀಗೆ ಐದಾರು ಕಾದಂಬರಿ ಬರೆದಿದ್ದಾರಂತೆ ಗಟ್ಟಿ!